# ಎನ್‌ಐಟಿಕೆಯಲ್ಲಿ ಕಾರ್ಯಾಗಾರ



**ಸುರತ್ಕಲ್, ಡಿ. 10:** ಎನ್‌ಐಟಿಕೆ ಸುರತ್ಕಲ್‌ನಲ್ಲಿ ಪ್ರಧಾನ ಮಂತ್ರಿ ಶ್ರೀ ಶಿಕ್ಷಕರಿಗೆ ಪುಷ್ಟೀಕರಣ, ಸೃಜನಶೀಲ ಶಿಕ್ಷಣ ಮತ್ತು ಸಾಮರ್ಥ್ಯ ವೃದ್ಧಿಯ ಕುರಿತು 5 ದಿನಗಳ ವಸತಿ ತರಬೇತಿ ಕಾರ್ಯಾಗಾರ ಆಯೋಜಿಸಲಾಗಿತ್ತು.

ಎನ್‌ಐಟಿಕೆ ಸುರತ್ಕಲ್‌ನ ನಿರ್ದೇಶಕ ಪ್ರೊ. ಬಿ. ರವಿ ಉದ್ಘಾಟಿಸಿದರು.

ದಕ್ಷಿಣದ ಐದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಆಂಧ್ರಪ್ರದೇಶ, ಕರ್ನಾಟಕ, ಕೇರಳ, ತಮಿಳುನಾಡು, ತೆಲಂಗಾಣ ಮತ್ತು ಪುದುಚೇರಿಯಾದ್ಯಂತದ ಜವಾಹರ್ ನವೋದಯ ವಿದ್ಯಾಲಯಗಳಿಂದ ಒಟ್ಟು 46 ಶಿಕ್ಷಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಅಧ್ಯಾಪಕರು ಮತ್ತು ಇತರ ಪ್ರಮುಖ ಸಂಸ್ಥೆಗಳ ತಜ್ಞರು, ಉದ್ಯಮ ವೃತ್ತಿಪರರು, ಸಲಹೆಗಾರರು ಮತ್ತು ನವೋದ್ಯಮ ಮಾರ್ಗದರ್ಶಕರು ನೇತೃತ್ವ ವಹಿಸಿದ್ದರು.

Samyuktha Karnataka, Date: 11/12/25, p, 04